ಎತ್ತಿದನ್ನಾಗಲೀ, ಲಾಟಿ ತೆಗೆದುಕೊಂಡು ಅವರಿವರ ಮೈ ಸವರಿದ್ದನ್ನಾಗಲೀ ನಾವು ಕಂಡಿದ್ದೇ ಇಲ್ಲ. ಧರುಮ–ಕರುಮ, ಆಚಾರ–ವಿಚಾರಗಳ ಬಗ್ಗೆ ಸ್ವಲ್ಪ ಜಾಸ್ತಿಯೇ ನಂಬಿಕೆ ಇಟ್ಟಂಥ ಸಾಹೇಬರು ಹಾಗೆಲ್ಲಾ ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು ಬಂದವರ ಎದುರಿಗೆ ತಮ್ಮ ವ್ಯಕ್ತಿತ್ವ ಹಗುರು ಮಾಡಿಕೊಳ್ಳುತ್ತಿರಲಿಲ್ಲ. ಅವರದೇನಿದ್ದರೂ ಕುಳಿತ ಕಡೆಯೇ ದಾರ ಸುತ್ತಿ ಗಾಳಿಯಲ್ಲಿ ಬುಗುರಿ ತೂರಿ ಅಂಗೈ ಮೇಲೆಯೇ ತಿರುಗಿಸಿಕೊಳ್ಳುವ ಜಾತಿ!

ಚಿತ್ತರಂಜನ ಸಾಹೇಬರು ಹೊಸಹೊಸಾ ಪ್ರಯೋಗಗಳನ್ನು ಮಾಡುವುದರಲ್ಲಿಯೂ ಎತ್ತಿದ ಕೈಯೇ. ಪ್ರತಿ ಠಾಣೆಯಲ್ಲೂ ಮಹಿಳಾ ಸಿಬ್ಬಂದಿಗಳಿರುವಂತೆ ನಮ್ಮ ಠಾಣೆಯಲ್ಲೂ ರಾಣಿ ಅಬ್ಬಕ್ಕದೇವಿ ಮಾದರಿಯ ಕೆಲವು ವೀರ ಮಹಿಳೆಯರಿರುತ್ತಿದ್ದರು ತಾನೆ? ಸಾಹೇಬರ ಇಮೇಜಿಗೆ ಮಾರುಹೋದವರಲ್ಲಿ ಅವರೂ ಸೇರಿದವರೇ ತಾನೇ? ಸಾಹೇಬರು ನೀಡಿದ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದವರಲ್ಲಿ ಅವರ ತಂಡವೂ ಮುಂಚೂಣಿಯಲ್ಲಿರುತ್ತಿತ್ತು ತಾನೆ? ಅವರಲ್ಲಿ ಕೆಲವರು ಕ್ರೀಡಾ ಕೋಟಾದಲ್ಲಿ ಆಯ್ಕೆಯಾಗಿದ್ದರಿಂದ ನಾಲ್ಕೈದು ಮಂದಿಯನ್ನು ಒಟ್ಟಿಗೇ ಹೆಡೆಮುರಿ ಕಟ್ಟುವಷ್ಟು ಶಕ್ತರಿದ್ದರು ತಾನೇ? ಅಂಥದೊಂದು ಸಶಕ್ತ ಟೀಮನ್ನು ಸಾಹೇಬರು ದೈನಂದಿನ ಕರ್ತವ್ಯಗಳಿಗೆ ನಿಯೋಜಿಸುತ್ತಿದ್ದ ರೀತಿಯೇ ವಿಶೇಷವಾಗಿರುತ್ತಿತ್ತು.

ಯಾರಾದರೂ ಆರೋಪಿ ವಿಚಾರಣೆಗೆ ನಿಂತಾಗ ಸಾಹೇಬರು ಕೇಳಿದ ಪ್ರಶ್ನೆಗಳಿಗೆ ಪಟಪಟನೆ ಉತ್ತರ ಹೇಳುತ್ತಾ ಹೋದನೆಂದರೆ ಸರಿ. ಇಲ್ಲದಿದ್ದರೆ, 'ತನುಜಾ... ಆ ನನ್ನ ಫೈಬರ್ ಲಾಟಿ ಕೊಂಚ ತಾರಮ್ಮಾ ತಂಗೀ... ಯಾಕೋ ಇವನು ಬರೇ ಮಾತಿಗೆ ಬಗ್ಗಂಗಿಲ್ಲಾ ಅಂತಾವನೆ...' ಅಂತ ಕೂಗು ಹಾಕಿದೊಡನೆ ಇಲಾಖೆಯಿಂದ ವಿತರಣೆ ಮಾಡಲ್ಪಟ್ಟ ಮೂರೂವರೆ ಅಡಿ ಉದ್ದದ ಫೈಬರು ಲಾಟಿಯೊಂದಿಗೆ ಪ್ರತ್ಯಕ್ಷಳಾಗುತ್ತಿದ್ದಳಾ ತನುಜಾ ದೇವಿಯೆನ್ನುವ ವೀರ ವನಿತೆ. ಆಕೆಯನ್ನು ಆ ಗೆಟಪ್ಪಿನಲ್ಲಿ ನೋಡಿದವರ ಪ್ಯಾಂಟು ಒದ್ದೆಯಾಗುತ್ತಿದುದಂತೂ ಖರೆ.

"ನೋಡೋ ಮನುಸಾ... ಏನೇ ಹಲುಖಾ ಕೆಲಸ ಮಾಡಿ ಬಂದಿದ್ರೂ ಊರಿನಾಗೆ ಅಲ್ಪಸೊಲ್ಪ ಮರ್ಯಾದೆ ಉಳಿಸ್ಕಂಡೇ ಇರ್ತೀಯಾ... ನಮ್ಮ ಹೆಣುಮಕ್ಕಳ ಕೈಲಿ ಪೂಜೆ ಪುನಸ್ಕಾರ ಮಾಡಿಸ್ಕಂಡು ಅದೂನೂವೆ ಕಳಕೋಬ್ಯಾಡಾ... ನಾಳೆ ಬೀದೀಲಿ ಹೊಗೋರೆಲ್ಲಾ ಇವನೇ ಕಣ್ರೇ ಸ್ಟೇಷನ್ನಿನ ಹೆಣ್ಮಕ್ಳು ಹಿಡುಕೊಂಡು ಒದ್ದಿದ್ದು ಅಂತ ಮಂಗಳಾರತಿ ಎತ್ತ್ತೋವಾಗ ಈ ಗಂಡು ಜಲುಮಾನೇ ಬ್ಯಾಡಾ ಅನ್ನಿಸಿಬಿಡುತದೆ... ನಿನ್ನ ಒಳ್ಳೇದಕ್ಕೇ ಹೇಳ್ತೀನಿ... ನಮ್ಮ ತನುಜಾ ಭಾರೀ ಒಳ್ಳೇಯವ್ಳು... ಎಲ್ಲೀ ತನಕಾ ಅಂದ್ರೆ ಕೈಯಿಗೆ ಲಾಟಿ ಬರೋ ತಂಕಾ... ಒಮ್ಮೆ ಸಿನಿಮಾ ಶುರು ಆಯ್ತಂದರೆ ಆಕೀ ನಿಲ್ಲಿಸಿದ್ರೂ ಅವಳ ಲಾಟಿ ಮಾತ್ರ ತಕಾ ತಕಾ ಅಂತ ಕುಣೀತಾನೆ ಇರ್ತದೆ... ನೋಡು, ಒಸಿ ಯೋಚ್ನೆ ಮಾಡು..." ಎನ್ನುವ ವಾರ್ನಿಂಗು ಎದುರಿದ್ದವನ ಕಿವಿಗೆ ಮರಣ ಮೃದಂಗದಂತೆ ಕೇಳುತ್ತಿದ್ದುದರಲ್ಲಿ ಆಶ್ಚರ್ಯವಿರುತ್ತಿರಲಿಲ್ಲ. ಎರಡೆಜ್ಜೆ ಮುಂದೆ ಬಂದವನೇ, "ಸಾರ್... ಆಯಮ್ಮನ್ನ ಕಳಿಸಿಬಿಡಿ... ನೀವು ಏನ್ ಕೇಳಿದ್ರೂ ಹೇಳಿಬುಡ್ತೀನಿ, ಹೆಣ್ಮಕ್ಳ ಕೈಯಾಗೆ ಮರ್ಯಾದೆ ತಗಿಸ್ಬ್ಯಾಡಿ...' ಅಂತ ವೈಯುಕ್ತಿಕವಾಗಿ ರಿಕ್ವಸ್ಟು ಮಾಡಿಕೊಳ್ಳುತ್ತಿದುದಲ್ಲದೆ ಮೌಖಿಕ ಪರೀಕ್ಷೆಗೆ ಬಂದ ವಿದ್ಯಾರ್ಥಿಯಂತೆ ಕೇಳಿದ್ದಕ್ಕೆಲ್ಲಾ ತಟ್ಟನೇ ಉತ್ತರ ಒಪ್ಪಿಸುತ್ತಿದ್ದನು.

ತನುಜಾಳಂತೆ ಠಾಣೆಯ ಉಳಿದ ಹರೇದ ಹೆಣ್ಮಕ್ಳು ತಮಗೂ ಸಾಹೇಬರ ಮೂಲಕ ರಂಗ ಪ್ರವೇಶಕ್ಕೆ ತಕ್ಕ ಸಂದರ್ಭ ಒದಗಿಬರಬಹುದು ಅಂತ ಲಾಟಿ ಹಿಡುದುಕೊಂಡು ಕಾದದ್ದೇ ಬಂತು. ಆ ಛಾನ್ಸು ನಾವು ಇರುವವರೆಗಂತೂ ಸಿಕ್ಕಲಿಲ್ಲ. "ಬಾಯಿ ಬಿಡಿಸುವುದೂ ಒಂದು ಕಲೆ ಕಣ್ರಯ್ಯಾ... ಸುಮ್ನೆ ಲಾಟಿ ಹಿಡ್ಕೊಂಡು ಹೆದರಿಸಿಬುಟ್ರೆ ಎಲ್ಲಾವನೂ ಬಾಯಿ ಬಿಟ್ಟುಡ್ತಾನೆ ಅಂದ್ಕಾಬೇಡಿ...